

ರನ್‌ಔಟ್ ಎಂದು ಫೀಲ್ಡಿಂಗ್‌ನವರು ಬೊಬ್ಬೆ ಹಾಕಿದರೆ, ರನ್‌ಔಟ್ ಅಲ್ಲ ಎಂದು ಬ್ಯಾಟಿಂಗ್ ಸೈಡಿನವರ ಅಬ್ಬರ ಮತ್ತೊಂದು ಜಗಳ.

ಆಟದ ತಂಡಗಳಿಗೆ ಜನ ಸಾಲದೆ ಇರುವಾಗ ಅಂಪೈರಿಂಗ್‌ಗೆ ಯಾರನ್ನು ತರುವುದು? ಹೀಗಾಗಿ ಕ್ರಿಕೆಟ್ ಮೈದಾನದ ಜಗಳಗಳು ಅಲ್ಲಲ್ಲೇ ಯಾವುದೋ ಒಂದು ರೀತಿಯಲ್ಲಿ ತಣ್ಣಗಾಗುತಿತ್ತು. ಹೆಚ್ಚೆಂದರೆ ಬ್ಯಾಟ್ಸ್‌ಮನ್ ತಾನು ಔಟ್ ಅಲ್ಲ, ಅನ್ಯಾಯ ಎಂದು ಹೇಳಿ, ಕ್ರೀಸ್‌ನಲ್ಲಿ ಬ್ಯಾಟ್ ಬಿಸುಟಿ ಪ್ರತಿಭಟಿಸಿದರೆ ಅದು ದೊಡ್ಡ ಜಗಳ. ಮುಂದಿನ ಬ್ಯಾಟ್ಸ್‌ಮನ್ ಅದೇ ಬ್ಯಾಟನ್ನು ಅದೇ ಕ್ರೀಸ್‌ನಲ್ಲಿ ಹಿಡಿಯಬೇಕಾಗಿರುವುದರಿಂದ ಅದೂ ದೊಡ್ಡ ಸಂಗತಿ ಆಗುತ್ತಿರಲಿಲ್ಲ. ಅಂತೂ ಕ್ರಿಕೆಟ್ ಜಗಳ ಮೈದಾನದಿಂದ ಹೊರಗೆ ಎಂದೂ ಹರಡುತ್ತಿರಲಿಲ್ಲ.

ಇಂತಿಪ್ಪ ಈ ಕ್ರಿಕೆಟ್ ಆಟದಲ್ಲಿ ಈ ವರುಷ ಬೇಲಿಮನೆ ರಮೇಶನಿಗೂ ತೋಟದ ಮನೆ ಶೀನನಿಗೂ ಉಂಟಾದ ಜಗಳ ತಾರಕಕ್ಕೇರಿ ಊರಿನೊಳಗೇ ಒಡಕು